918 ಹೈಸ್ಕೂಲ್ ಟೀಚರ್ಸ್ ಅನ್ನು ಪ್ರಮೋಷನ್ ಮಾಡಿದ್ದು, ತಾವು ಒಮ್ಮೆ ಆಜ್ಞೆ ಮಾಡಿದ್ದೀರಿ, ವರ್ಗಾವಣೆ ನೀತಿಯಲ್ಲಿ ಬದಲಾವಣೆ ಮಾಡಬೇಕೆಂದು ಹೇಳಿದ್ದೀರಿ. ಅವರನ್ನು ಕೌನ್ಸಲಿಂಗ್ ಮೂಲಕ ವರ್ಗಾವಣೆ ಮಾಡಿ, ಸಿಟಿಯಿಂದ ಹಳ್ಳಿಗಳಿಗೆ ಹಾಕುವಂಥ ಕೆಲಸವನ್ನು ಮಾಡಿದ್ದೇವೆ. ಈಗ 475 ಹುದ್ದೆಗಳನ್ನು KPSC ಯವರು ಆಯ್ಕೆ ಮಾಡಿದ್ದಾರೆ. ಆ ಲಿಸ್ಟ್ ಅನ್ನು ಅವರು ಇವತ್ತು ಕೊಟ್ಟರೆ, ಇವತ್ತೇ ನಾವು ಅವರನ್ನು ಪೋಸ್ಟಿಂಗ್ ಮಾಡುತ್ತೇವೆ. ಇನ್ನು 1,700 ಟೀಚರ್ಸ್ ಅನ್ನು ನೇಮಕ ಮಾಡುವುದಕ್ಕೆ ಹಣಕಾಸು ಇಲಾಖೆ ಅನುಮತಿಯನ್ನು ಕೊಟ್ಟಿದ್ದಾರೆ. ನಾವು ಅದನ್ನು KPSC ಯವರಿಗೆ ಕಳುಹಿಸಿದ್ದೇವೆ. ಅದಕ್ಕೆ ಕೆಲವು ತಾಂತ್ರಿಕ ತೊಂದರೆಗಳು ಆಗಿದ್ದರಿಂದ ಇವತ್ತು ಆ ಫೈಲ್ ವಾಪಸ್ಸು ಬಂದಿದೆ. ಅದನ್ನು ಪರೀಕ್ಷೆ ಮೂಲಕ ತಕ್ಷಣ ಮಾಡಿ, ಅದಕ್ಕೆ interview ಕರೆದು ಮಾಡುವುದು ಬೇಡ. ಅದಕ್ಕೆ ಪರೀಕ್ಷೆಯನ್ನು ಮಾಡಿ ಆದಷ್ಟು ಬೇಗ 2–3 ತಿಂಗಳುಗಳಲ್ಲಿ 1,700 ಜನ ಟೀಚರ್ಸ್‌ಗಳನ್ನು ಭರ್ತಿ ಮಾಡುವುದಕ್ಕೆ ಪರೀಕ್ಷೆ ಮಾಡಿ ಅವರು ಕೊಟ್ಟರೆ ಈ ಹುದ್ದೆಗಳ ಭರ್ತಿ ಬೇಗ ಆಗುತ್ತದೆ. ಆ ದೃಷ್ಟಿಯಲ್ಲಿ KPSC ಯವರಿಗೆ ಹೇಳಿದ್ದೇವೆ. ಅಲ್ಲಿಯವರೆಗೆ ನಾವು ಟೆಂಪರರಿಯಾಗಿ ಪಾರ್ಟ್ ಟೈಮ್ ಉಪಾಧ್ಯಾಯರನ್ನು ಕೊಟ್ಟಿದ್ದೇವೆ. ಇವತ್ತು ನಾವು ಬೇಗ ಮಾಡುವ ಕೆಲಸವನ್ನು ಮಾಡುತ್ತೇವೆ. ಇನ್ನು ಪಾರ್ಟ್ ಟೈಮ್ ಟೀಚರ್ಸ್ ಯಾರು ಇದ್ದಾರೆ. ಅವರಲ್ಲೂ ಕೆಲವರನ್ನು ಪರ್ಮನೆಂಟ್ ಮಾಡುವ ಕೆಲಸ ನಡೆದಿದೆ. ಹೀಗಾಗಿ ಹಿಂದಿನಿಂದ ಇದ್ದಂಥ ತೊಂದರೆಗಳನ್ನು ಇನ್ನು ಒಂದೆರಡು ತಿಂಗಳಲ್ಲಿ ಸರಿಮಾಡಿ ಕೊಡುತ್ತೇವೆ. ಅಲ್ಲಿಯವರೆಗೆ ಏನಾದರೂ ಬೇರೆ ವ್ಯವಸ್ಥೆಯನ್ನು ಮಾಡುವಂಥ ಕೆಲಸವನ್ನು ಮಾಡುತ್ತೇವೆ.

ಆಶ್ರಯ ವಸತಿ ಯೋಜನೆ

192 (1403) ಶ್ರೀ **ಬೋಪಯ್ಯ ಕೆ.ಜಿ.** (ಮಡಿಕೇರಿ) :– ಮಾನ್ಯ ವಸತಿ ಸಚಿವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಕೊಡಗು ಜಿಲ್ಲೆಯಲ್ಲಿ ಆಶ್ರಯ ಮನೆ ಯೋಜನೆಯಡಿ ಮನೆ ನಿವೇಶನಗಳನ್ನು ಹಂಚಲು ಸ್ಥಳದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಆಶ್ರಯ ಯೋಜನೆಯ ಮನೆಗಳನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಇ) 2006–07ನೇ ಸಾಲಿನಲ್ಲಿ ಎಷ್ಟು ಮನೆಗಳನ್ನು ಹಂಚಲಾಗಿದೆ? ಈಗಾಗಲೇ ಎಷ್ಟು ಮನೆಗಳು ಪೂರ್ಣಗೊಂಡಿವೆ? (ಕ್ಷೇತ್ರದ ಪಂಚಾಯತಿವಾರು ವಿವರ ಒದಗಿಸುವುದು)

ಶ್ರಿ ಡಿ.ಟಿ. ಜಯಕುಮಾರ್ (ಮಾನ್ಯ ವಸತಿ ಸಚಿವರು):-

(ಅ) ಸರ್ಕಾರದ ಗಮನಕ್ಕೆ ಬಂದಿದೆ.

(ಆ) ಸರ್ಕಾರಿ ಜಾಗವಿಲ್ಲದ ಕಡೆಗಳಲ್ಲಿ ಖಾಸಗಿ ಜಮೀನುಗಳನ್ನು ಖರೀದಿ ಮಾಡಿ ನಿವೇಶನ ರಹಿತರಿಗೆ ನಿವೇಶಗಳನ್ನು ನೀಡಿ ವಸತಿ ಸೌಕರ್ಯವನ್ನು ಕಲ್ಪಿಸಿಕೊಡಲಾಗುವುದು.

(ಇ) 2006–07ನೇ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳಡಿ ಮನೆಗಳನ್ನು ನೀಡಲಾಗಿದೆ.

ಕ್ರ ಸಂ.	ಯೋಜನೆ	ಗುರಿ	ಆಯ್ಕೆಯಾದ ಫಲಾನುಭವಿಗಳ ವಿವರ	ಪೂರ್ಣಗೊಂಡ ಮನೆಗಳು
1	ಗ್ರಾಮೀಣ ಆಶ್ರಯ	5,880	3452	0
2	ಇಂದಿರಾ ಅವಾಸ್	494	108	450
3	ನಗರ ಆಶ್ರಯ	ಸರ್ಕಾರವು ಗುರಿಯನ್ನು ನಿಗದಿಪಡಿಸಿರುವುದಿಲ್ಲ		
4	ಗ್ರಾಮೀಣ ಅಂಬೇಡ್ಕರ್	ಸರ್ಕಾರವು ಗುರಿಯನ್ನು ನಿಗದಿಪಡಿಸಿರುವುದಿಲ್ಲ		

ಗ್ರಾಮೀಣ ಆಶ್ರಯ 2006–07ನೇ ಸಾಲಿನಲ್ಲಿ ಗುರಿ ಮತ್ತು ಆಯ್ಕೆಯಾದ ಫಲಾನುಭವಿಗಳ ಗ್ರಾಮ ಪಂಚಾಯತಿ ವಿವರ ಅನುಬಂಧ–1 ರಲ್ಲಿ ನೀಡಲಾಗಿದೆ.

ಇಂದಿರಾ ಅವಾಸ್ ಯೋಜನೆಯಡಿಯಲ್ಲಿ ಆಯ್ಕೆಮಾಡಲಾದ ಫಲಾನುಭವಿಗಳ ಗ್ರಾಮ ಪಂಚಾಯತಿ ವಿವರ ಅನುಬಂಧ–2ರಲ್ಲಿ ನೀಡಲಾಗಿದೆ.

2006–07ನೇ ಆರ್ಥಿಕ ವರ್ಷದಲ್ಲಿ ಹಿಂದಿನ ಶ್ರೇಣಿಯಲ್ಲಿ ಬಾಕಿ ಇದ್ದ ಮನೆಗಳೂ ಸೇರಿದಂತೆ ಒಟ್ಟು 450 ಮನೆಗಳನ್ನು ಪೂರ್ಣಗೊಳಿಸಲಾಗಿದು, ಈ ವಿವರಗಳನ್ನು ತಾಲ್ಲೂಕುವಾರು ನಿರ್ವಹಿಸಲಾಗುತ್ತಿದ್ದು, ವಿವರಗಳನ್ನು ಅನುಬಂಧ–3 ರಲ್ಲಿ ನೀಡಲಾಗಿದೆ.

ಪಕ್ಷಾಂತರ-೦

ಜಿಲ್ಲೆ	ತಾಲ್ಲೂಕು	ಬೂತ್	ಗರಿಷ್ಠ	ಚಲಾವಣೆಯಾದ ಮತಗಳು
1	2	3	4	5
Kodagu	Madikeri	Ballamavati	60	60
Kodagu	Madikeri	Tengeor	60	37
Kodagu	Madikeri	Bettageri	60	23
Kodagu	Madikeri	Bhagamandala	60	59
Kodagu	Madikeri	Chambu	60	57
Kodagu	Madikeri	Galibeedu	60	19
Kodagu	Madikeri	Hakathur	60	51
Kodagu	Madikeri	Hoddur	60	13
Kodagu	Madikeri	Kadagadalu	60	30
Kodagu	Madikeri	Kalakeri Nidugane	60	43
Kodagu	Madikeri	Kanthur Murnad	60	30
Kodagu	Madikeri	Karike	60	58
Kodagu	Madikeri	Kovanjageri	60	40
Kodagu	Madikeri	Kundachcri	60	20
Kodagu	Madikeri	Kunjila	60	13
Kodagu	Madikeri	Mado	60	38
Kodagu	Madikeri	Makkandur	60	10
Kodagu	Madikeri	Mangodu	60	55
Kodagu	Madikeri	Napoklu	60	39
Kodagu	Madikeri	Nariandada	60	46
Kodagu	Madikeri	Perajc	60	38
Kodagu	Madikeri	Sampaje	60	60
	Madikeri Total		1320	842
Kodagu	Somvarpet	Th Hosakote	60	60
Kodagu	Somvarpet	Aigur	60	60
Kodagu	Somvarpet	Alur - Siddapura	60	112
Kodagu	Somvarpet	Belur	60	60
Kodagu	Somvarpet	Bosur	60	60
Kodagu	Somvarpet	Bettadalli	60	58
Kodagu	Somvarpet	Byadagotta	60	60
Kodagu	Somvarpet	Chettali	60	38
Kodagu	Somvarpet	Chikvalu	60	60
Kodagu	Somvarpet	Doddamolhe	60	60
Kodagu	Somvarpet	Dundalli	60	59
Kodagu	Somvarpet	Ganagur	60	60

ಅನುಬಂಧ-೦

೧	೨	೩	೪	೫
1	2	3	4	5
Kodagu	Somvarpet	Gerwale	60	60
Kodagu	Somvarpet	Gonicoppa	60	60
Kodagu	Somvarpet	Gudichoor	60	60
Kodagu	Somvarpet	Hangalur	60	60
Kodagu	Somvarpet	Hardi	60	60
Kodagu	Somvarpet	Harangi	60	58
Kodagu	Somvarpet	Hebbet	60	58
Kodagu	Somvarpet	Hardhalli	60	40
Kodagu	Somvarpet	Kadakolu	60	52
Kodagu	Somvarpet	Kirgandur	60	6
Kodagu	Somvarpet	Kodagerahalli	50	31
Kodagu	Somvarpet	Kodlipet	60	60
Kodagu	Somvarpet	Kudige	60	58
Kodagu	Somvarpet	Kudumangalur	60	60
Kodagu	Somvarpet	Madapura	60	57
Kodagu	Somvarpet	Mullusoge	60	60
Kodagu	Somvarpet	Nalkur Sirangala	60	60
Kodagu	Somvarpet	Nanjarayapatna	60	60
Kodagu	Somvarpet	Nellihudikeri	60	60
Kodagu	Somvarpet	Nerugalale	60	60
Kodagu	Somvarpet	Nidtha	60	60
Kodagu	Somvarpet	Shanivarsanthe	60	26
Kodagu	Somvarpet	Shanthalli	60	60
Kodagu	Somvarpet	Sirangala	60	60
Kodagu	Somvarpet	Sriddlapura	60	53
Kodagu	Somvarpet	Tadka Shanthalli	60	60
Kodagu	Somvarpet	Thoramuri	60	60
Kodagu	Somvarpet	Valnur Uruvagatha	60	47
	Somvarpet Total		2400	2247
Kodagu	Virajpet	Ammathi	60	40
Kodagu	Virajpet	Arvathoklu	60	14
Kodagu	Virajpet	B. Shanigeri	60	15
Kodagu	Virajpet	Balele	60	15
Kodagu	Virajpet	Bhaliyamagalur	60	12
Kodagu	Virajpet	Betoli	60	28

1	2	3	4	5
Kodagu	Virajpet	Bhagavada	60	5
Kodagu	Virajpet	Biramani	60	3
Kodagu	Virajpet	Bittangala	60	27
Kodagu	Virajpet	Chambebellur	60	16
Kodagu	Virajpet	Chennavanakolu	60	5
Kodagu	Virajpet	Devarapura	60	7
Kodagu	Virajpet	Gonikoppa	60	11
Kodagu	Virajpet	Halagunda	60	1
Kodagu	Virajpet	Hathur	60	5
Kodagu	Virajpet	Hosur	60	6
Kodagu	Virajpet	Hudikeri	60	13
Kodagu	Virajpet	Kadugasamara	60	3
Kodagu	Virajpet	Kadanur	60	3
Kodagu	Virajpet	Kannangala	60	23
Kodagu	Virajpet	Kanoor	60	1
Kodagu	Virajpet	Kannadu	60	1
Kodagu	Virajpet	Kodamalur	60	6
Kodagu	Virajpet	Kirugur	60	4
Kodagu	Virajpet	Kutta	60	18
Kodagu	Virajpet	Maddare	60	17
Kodagu	Virajpet	Mayamudi	60	7
Kodagu	Virajpet	Nalkeri	60	3
Kodagu	Virajpet	Nittur	60	0
Kodagu	Virajpet	Polibetta	60	0
Kodagu	Virajpet	Ponnampet	60	5
Kodagu	Virajpet	Ponnappasanthe	60	12
Kodagu	Virajpet	Siddapura	60	5
Kodagu	Virajpet	Srimangala	60	4
Kodagu	Virajpet	T. Shettigeri	60	15
Kodagu	Virajpet	Tithimathi	60	23
Virajpet Total			2160	363
Grand Total			5880	3452

ಅನುಬಂಧ-2

IAY 2006-07 Kodagu District

Beneficiary approved as on 23/07/2007

Sl No	Taluka	GP	Target	Beneficiaries Approved
	1 Somvarpet	Besur		30
	2 Somvarpet	Alur Siddapura		11
	3 Somvarpet	Nerugadale	125	18
	4 Somvarpet	Yadiyur		19
	5 Somvarpet	Kudumangalur		30
	6 Madikeri	-	140	114
	7 Virajpet	-	229	95
	Total		494	168

* ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿದೆ.

ಅನುಬಂಧ-3

Indira Awaz Yojana			
District	Taluk	2006-07	
		Target	Completed
1	2	5	6
Kodagu	Madikeri	140	143
Kodagu	Somvarpet	125	130
Kodagu	Virajpet	229	177
Kodagu Total		494	450

ಮಂಜೂರಾಗಿರುವ ಮನೆಗಳಲ್ಲಿ ಹಂತವಾರು ಪ್ರಗತಿಯಲ್ಲಿರುವ ಮನೆಗಳ ವಿವರಗಳು.

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ಕೊಡಗು ಜಿಲ್ಲೆಯಲ್ಲಿ ಆಶ್ರಯ ಮನೆಗಳಿಗೆ ಸಂಬಂಧಪಟ್ಟಂತೆ, ಮನೆಗಳ ನಿರ್ಮಾಣಕ್ಕೆ ಜಾಗದ ಕೊರತೆ ಇರುವುದು, ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಗೆ ಸರ್ಕಾರದ ಗಮನಕ್ಕೆ ಬಂದಿದೆಯೆಂಬ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಇದನ್ನು ಹೇಗೆ ನಿಭಾಯಿಸಬಹುದೆಂಬುದಕ್ಕೆ ಖಾಸಗಿ ಜಮೀನಿನಲ್ಲಿ ಮಾಡುವುದಕ್ಕೆ ಕ್ರಮ ಕೈಗೊಳ್ಳಲಾಗುವುದೆಂದು ಉತ್ತರ ಕೊಟ್ಟಿದ್ದಾರೆ. ಆದರೆ ಇವತ್ತು ಜಿಲ್ಲೆಯಲ್ಲಿರುವ ಪರಿಸ್ಥಿತಿ ಏನೆಂದರೆ, ಖಾಸಗಿ ಜಮೀನಿನ ಮೇಲೆ ನಮಗೆ ಹಕ್ಕು ಇಲ್ಲ. ಅದು ಎಲ್ಲಾ ಸರ್ಕಾರದ್ದು ಎಂದು ಕಂದಾಯ ಇಲಾಖೆ ಈಗಾಗಲೇ ಸುತ್ತೋಲೆಯನ್ನು ಹೊರಡಿಸಿದೆ. ನೀವು ಎಷ್ಟು ಖಾಸಗಿ ಜಮೀನನ್ನು purchase ಮಾಡುವುದಕ್ಕೆ ಎಲ್ಲೆಲ್ಲಿ ಕ್ರಮ ಕೈಗೊಂಡಿದ್ದೀರಿ? ಇದು ಒಂದು ಪ್ರಶ್ನೆ. ಈಗಾಗಲೇ ತಾವು ಏನು ಪಂಚಾಯತಿವಾರು ವರದಿಯನ್ನು ಕೊಟ್ಟಿದ್ದೀರಿ ಎಲ್ಲೂ ಕೂಡ 60 ಮನೆಗಳನ್ನು ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲೂ ಕೊಡುವುದಕ್ಕೆ ಆಗುತ್ತಾ ಇಲ್ಲ. ಅದಕ್ಕೆ ಕಾರಣವೆಂದರೆ ಅವರಿಗೆ ಎಲ್ಲೂ ಸ್ಥಳಗಳಿಲ್ಲ. ಇನ್ನೊಂದು ನನ್ನ ಪ್ರಶ್ನೆ ಏನೆಂದರೆ, ಅನೇಕ ಜನ ಸರ್ಕಾರಿ ಜಮೀನಿನಲ್ಲಿ ಇದ್ದಾರೆ. ಆದರೆ ಅವರಿಗೆ ಹಕ್ಕುಪತ್ರಗಳು ಇಲ್ಲ. ಅನೇಕರು ನಿಗದಿತ ಸಮಯದಲ್ಲಿ ಫಾರಂ ನಂ.1ರಲ್ಲಿ ಕೊಡಬೇಕಾಗಿತ್ತೋ, ಅದನ್ನು ಕೊಡದೇ ಇರುವುದರಿಂದ ಅವರಿಗೆ ಇವತ್ತು ಹಕ್ಕುಪತ್ರಗಳು ಸಿಗದೇ, ಈ ಆಶ್ರಯ ಮನೆ ಯೋಜನೆ ಜಿಲ್ಲೆಯಲ್ಲಿ ಕಾರ್ಯಗತವಾಗುತ್ತಾ ಇಲ್ಲ. ಕನಿಷ್ಟ ಪಕ್ಷ ಈಗಾಗಲೇ ಸರ್ಕಾರಿ ಜಮೀನಿನಲ್ಲಿ ಯಾರು ಇದ್ದಾರೆ, ಅವರನ್ನು ಗುರುತಿಸಿ, ಹಕ್ಕುಪತ್ರವನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಿದರೆ, ಈ ಒಂದು ಕಾರ್ಯಕ್ರಮ ಯಶಸ್ವಿಯಾಗಿ ಜಾರಿಯಾಗುತ್ತದೆ, ಇಲ್ಲದಿದ್ದರೆ ಆಗುವುದಿಲ್ಲ. ಈ ಖಾಸಗಿ ಜಮೀನಿನ ಬಗ್ಗೆ ತಾವು ಏನು ಹೇಳುತ್ತೀರಿ. ಅದು ಖಂಡಿತ ಆಗುವುದಿಲ್ಲವೆನ್ನುವಂಥದ್ದು, ಆದರೆ ತಾವು ಇದಕ್ಕೆ ಏನು ಕ್ರಮವನ್ನು ಕೈಗೊಳ್ಳುತ್ತೀರೆಂಬ ಬಗ್ಗೆ ನನಗೆ ಉತ್ತರ ಬೇಕು.

ಶ್ರೀ ಡಿ.ಟಿ. ಜಯಕುಮಾರ್: ಮಾನ್ಯ ಅಧ್ಯಕ್ಷರೆ, ಇದು ಬಹಳ ದಿವಸಗಳಿಂದ ಇರುವಂಥ ಒಂದು ದೊಡ್ಡ ಸಮಸ್ಯೆ, ಅದರಲ್ಲೂ ವಿಶೇಷವಾಗಿ ಕೂರ್ಗ್ ಜಿಲ್ಲೆ, ಉಡುಪಿ, ದಕ್ಷಿಣ ಕನ್ನಡ, ಉತ್ತರ ಕರ್ನಾಟಕ, ಪಶ್ಚಿಮ ಘಟ್ಟ, ಕರಾವಳಿ ಪ್ರದೇಶಗಳಲ್ಲಿ ಈ ಸಮಸ್ಯೆ ಇರುವಂಥಾದ್ದು, ಎಲ್ಲಾ ಫಾರೆಸ್ಟ್ ಲ್ಯಾಂಡ್ ಕೂಡ ಯಾರಿಗೂ ownership ಅನ್ನು ಟ್ರಾನ್ಸ್‌ಫರ್ ಮಾಡಿಲ್ಲ. ಆ ಕಾರಣಕೋಸ್ಕರವಾಗಿ, ಮತ್ತೆ ಗುಡ್ಡಗಾಡು ಮತ್ತು ಇಳಿಜಾರು ಪ್ರದೇಶಗಳಲ್ಲಿ ಸಣ್ಣ ಸಣ್ಣ ಮನೆಗಳನ್ನು ಕಟ್ಟಿಕೊಳ್ಳಬೇಕಾದರೆ, ಯಾರು ಆರ್ಥಿಕವಾಗಿ

ಸಬಲರಾಗಿರುತ್ತಾರೆ. ಅವರು ಮಾತ್ರ ಭೂಮಿಯನ್ನು ಮಟ್ಟ ಮಾಡಿಕೊಂಡು ಮನೆ ಮಾಡಿಕೊಳ್ಳುತ್ತಾರೆ. ಆದರೆ ಕಡು ಬಡವರಿಗೆ ಹೊಟ್ಟೆಗೆ ಇಲ್ಲ. ಅವರು ಭೂಮಿಯನ್ನು ಸಮ ಮಾಡಿಕೊಂಡು ಮನೆ ಕಟ್ಟಿಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಆದುದರಿಂದ ಇದರ ಬಗ್ಗೆ ಸರ್ಕಾರ ವಿಶೇಷ ಗಮನವನ್ನು ನೀಡಿ, ಹಕ್ಕು ಪತ್ರವನ್ನು ಕೊಟ್ಟರೆ ಮಾತ್ರ ಇವರಿಗೆ ಅಸೆಸ್‌ಮೆಂಟ್ ಸಿಗುತ್ತದೆ. ಇಲ್ಲದೇ ಹೋದರೆ ಅವರಿಗೆ ಆಶ್ರಯ ಮನೆಗಳು ದಕ್ಕುವುದಿಲ್ಲ. ಆ ಕಾರಣಕೋಸ್ಕರವೇ ನಗರ ಆಶ್ರಯದಲ್ಲಿ ಮಾನ್ಯ ಶಾಸಕರೇ ಅಧ್ಯಕ್ಷರಾಗಿರುವುದರಿಂದ, ಅವರು ಸರ್ಕಾರಿ ಜಮೀನು ಇಲ್ಲದೇ ಹೋದರೂ ಕೂಡ ಖಾಸಗಿ ಜಮೀನುಗಳನ್ನು guidance value, ಏನು ಇದೆ. Sub Registrar Office ನಲ್ಲಿರುವಂಥ ಬೆಲೆ ಏನು ಇದೆ, ಅದಕ್ಕಿಂತ ಶೇ 20 ರಷ್ಟು ಹೆಚ್ಚಿಗೆ ಕೊಡುವುದಕ್ಕೆ ನಾವು ತಯಾರಿದ್ದೇವೆ. ಆದರೆ ನೀವು ಜಾಗವನ್ನು ಗುರುತು ಮಾಡಿ, ಖಾಸಗಿಯವರು ಜಾಗವನ್ನು ಕೊಡುವುದಾರೆ, ಇದಕ್ಕೆ ನಿಮ್ಮ ಅಧ್ಯಕ್ಷತೆಯಲ್ಲೇ ಆ ಸಮಿತಿ ಇರುವುದರಿಂದ, ನೀವು ಜಾಗವನ್ನು ಗುರುತು ಮಾಡಿ, ನೀವು ಪ್ರಸ್ತಾವನೆಯನ್ನು E.O. ಮುಖಾಂತರ, D.C. ಮುಖಾಂತರ ಕಳುಹಿಸಿ, ಕೊಟ್ಟರೆ, ನಾವು ಹಣವನ್ನು ಬಿಡುಗಡೆ ಮಾಡುವುದಕ್ಕೆ ತಯಾರಿದ್ದೇವೆ. ತಾವೇ ಆ ಸಮಸ್ಯೆಗೆ ಪರಿಹಾರವನ್ನು ಕಂಡು ಹಿಡಿಯಬೇಕೇ ಹೊರತು, ನಾವು ಬಂದು ಅಲ್ಲಿ ಕುಳಿತುಕೊಂಡು ಯಾವ ಜಾಗವೆಂದು ನೋಡುವುದಕ್ಕೆ ಬರುವುದಿಲ್ಲ. ಆ ಜವಾಬ್ದಾರಿ ನಿಮ್ಮ ಮೇಲೆ ಇದೆ. ನೀವು ಜಾಗವನ್ನು ಕೊಟ್ಟರೆ, ಖಂಡಿತ ಮನೆಗಳನ್ನು ಕಟ್ಟಿಕೊಡುವುದಕ್ಕೆ ಸರ್ಕಾರ ಬದ್ಧವಾಗಿದೆಯೆಂಬ ಮಾತನ್ನು ತಮಗೆ ಹೇಳುತ್ತೇನೆ.

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಪ್ರಶ್ನೆಯನ್ನು ಕೇಳುತ್ತೇನೆ.

ಅಧ್ಯಕ್ಷರು: ತಾವು ಕುಳಿತುಕೊಳ್ಳಿ, ಇನ್ನು ಪ್ರಶ್ನೆಗಳು ಇವೆ.

ಶ್ರೀ ಕೆ.ಜಿ. ಬೋಪಯ್ಯ: ಮಾನ್ಯ ಅಧ್ಯಕ್ಷರೆ, ಈಗ ಬಡವರು ಯಾರು ಫಾರೆಸ್ಟ್ ಲ್ಯಾಂಡ್‌ನಲ್ಲಿ ಇದ್ದಾರೆಂಬ ಮಾತನ್ನು ಮಾನ್ಯ ಮಂತ್ರಿಯವರು ಹೇಳಿದ್ದಾರೆ. ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಯಾರು ಫಾರಸ್ಟ್ ಒಳಗೆ ಇಲ್ಲ, ಎಲ್ಲರೂ ಸರ್ಕಾರಿ ಜಮೀನಿನಲ್ಲಿ 5 ಸೆಂಟ್, 10 ಸೆಂಟ್‌ನಲ್ಲಿ ಇದ್ದಾರೆ. ಆದರೆ ಅವರಿಗೆ ಮಾಹಿತಿ ಇಲ್ಲದೇ ಫಾರ ನಂ 1 ಅನ್ನು ಕೊಟ್ಟಿಲ್ಲ. ಅವರಿಗೆ ಇದನ್ನು ಕೊಡುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಡಿ. ಇವತ್ತು ಫಾರೆಸ್ಟ್ ಒಳಗಡೆ ಇದ್ದರೂ ಕೂಡ ಕೇಂದ್ರ

ಸರ್ಕಾರ SC/ST ಯಾರು ಇದ್ದಾರೆ, ಅವರಿಗೆ Forest Protection Act ಪ್ರಕಾರ ತಂದಿದೆ. ಅದನ್ನು ಜಾರಿಗೊಳಿಸುವಂಥ ವ್ಯವಸ್ಥೆಯನ್ನಾದರೂ ಮಾಡಬೇಕಲ್ಲಾ, ಮತ್ತೆ ಖಾಸಗಿ ಜಮೀನು ಎಲ್ಲಿ ಇದೆ? ನಿಮ್ಮ ಕಂದಾಯ ಇಲಾಖೆಯ ಕಾರ್ಯದರ್ಶಿಯವರು ಸುತ್ತೋಲೆಯನ್ನು ಹೊರಡಿಸಿ, ನಿಮಗೆ ಹಕ್ಕೇ ಇಲ್ಲ, ಅದೆಲ್ಲಾ ಸರ್ಕಾರದ್ದು, ಖಾಲಿ ಮಾಡಿ ಎಂದು ಹೇಳಿದ್ದಾರೆ. ನಮ್ಮ ಅಧ್ಯಕ್ಷತೆಯಲ್ಲಿ ಸಮಿತಿ ಎಲ್ಲಿ ಇದೆ?

ಶ್ರೀ ಡಿ.ಟಿ. ಜಯಕುಮಾರ್ : ನಗರ ಆಶ್ರಯ ಸಮಿತಿ...

ಶ್ರೀ ಕೆ.ಜಿ. ಬೋಪಯ್ಯ ನಗರದ್ದು ಇರಬಹುದು, ನಾನು ನಗರದ್ದು ಕೇಳಲಿಲ್ಲ. ನೀವು ಗ್ರಾಮೀಣ ಪ್ರದೇಶದ ಮಾಹಿತಿಯನ್ನು ಕೊಟ್ಟಿದ್ದೀರಿ. ಇಲ್ಲಿ ಶೇ. 50ರಷ್ಟು ಆಗಿಲ್ಲ, ಕಾರಣವೇನೆಂದರೆ ಜಮೀನು ಇಲ್ಲದೇ ಇರುವುದು.

ಅಧ್ಯಕರು: ಮಾನ್ಯ ಬೋಪಯ್ಯನವರೆ, ತಾವು ಮಾನ್ಯ ಮಂತ್ರಿಯವರ ಹತ್ತಿರ ಕುಳಿತು ನಿಮ್ಮ ಸಮಸ್ಯೆಯನ್ನು ಬಗೆಹರಿಸಿಕೊಳ್ಳಿ.

ಶ್ರೀ ಡಿ.ಟಿ. ಜಯಕುಮಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಭಾವನೆ ನನಗೆ ಅರ್ಥವಾಗುತ್ತದೆ. ಅವರು ನನ್ನ ಹತ್ತಿರ ಬಂದು ಡಿಸ್‌ಕಸ್ ಮಾಡಲಿ, ಆ ಸಮಸ್ಯೆಗೆ ಪರಿಹಾರ ಕೊಡುತ್ತೇವೆ.

ಸರ್ಕಾರಿ ಪದವಿ ಕಾಲೇಜು ಸ್ಥಾಪನೆ

193 (523) ಶ್ರೀ ಮೋಹನ್ ಪಿ.ಸಿ. (ಚಿಕ್ಕಪೇಟೆ) :– ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿ ಎಷ್ಟು ಸರ್ಕಾರಿ ಪದವಿ ಕಾಲೇಜುಗಳಿವೆ; ಹೊಸದಾಗಿ ಎಷ್ಟು ಕಾಲೇಜುಗಳನ್ನು ಈ ವರ್ಷ ಪ್ರಾರಂಭಿಸಲು ಅನುಮತಿ ನೀಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಈಗಿರುವ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಎಷ್ಟು ಉಪನ್ಯಾಸಕರ ಕೊರತೆ ಇದೆ ಹಾಗೂ ಹೊಸದಾಗಿ ತೆರೆದಿರುವ ಕಾಲೇಜುಗಳಿಗೆ ಎಷ್ಟು ಉಪನ್ಯಾಸಕರ ಅವಶ್ಯಕತೆ ಇದೆ; (ತಾಲ್ಲೂಕುವಾರು ವಿವರ ನೀಡುವುದು)